**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕಃ **03.02.2026.**

**ಪಾಟೀ ಸವಾಲು:-** ಶ್ರೀ ಎಸ್ ಆರ್ ಎಸ್ ಪ್ರತಿವಾದಿಯ ಪರ ವಕೀಲರಿಂದ

ವಾದಿಗಳು ಲೇಟ್ ಮಲ್ಲೇಗೌಡನ ಮಕ್ಕಳು ಎಂದರೆ ಸರಿ. ಸದರಿ ಮಲ್ಲೇಗೌಡರಿಗೆ ಎರಡನೇ ಪ್ರತಿವಾದಿ ಒಬ್ಬನೇ ಗಂಡು ಮಗ ಎಂದರೆ ಸರಿ. ಒಂದನೇ ಪ್ರತಿವಾದಿ ಎರಡನೇ ಪ್ರತಿವಾದಿಯ ತಾಯಿ ಎಂದರೆ ಸರಿ. 1 ವಾದಿಯು ಈ ಹಿಂದೆ ಅಸಲು ದಾವೆ 656/2012 ಅನ್ನು ಹಾಕಿದ್ದು ಆ ಬಗ್ಗೆ ಗೊತ್ತ ಎಂದರೆ ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ. ಮಲ್ಲೇಗೌಡರು ಮರಣ ಹೊಂದಿ ಸುಮಾರು 5-6 ವರ್ಷ ಆಗಿದೆ. ಸದರಿಯವರು ಮರಣ ಹೊಂದಿದಾಗ ಎಷ್ಟು ವರ್ಷ ಆಗಿತ್ತು ಎಂದು ಗೊತ್ತಿಲ್ಲ. ಅವರನ್ನು ಊರಿನಲ್ಲಿ ಮಲ್ಲಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ. ಅವರು ವ್ಯವಸಾಯ ಮಾಡುತ್ತಿದ್ದರು. ಈ ದಾವೆಯನ್ನು ಎಷ್ಟು ಐಟಂಗಳಿಗೆ ಹಾಕಿದ್ದರೆ ಎಂದು ಗೊತ್ತಿಲ್ಲ. ಮಲ್ಲಪ್ಪ ರವರು ಇದ್ದಾಗಲೇ ಅವರ ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದರು. ದಾವಾ ಸ್ವತ್ತುಗಳಿಂದ ಬಂರುತ್ತಿದ್ದ ಆದಾಯವನ್ನು ಹೊರತುಪಡಿಸಿದರೆ ಬೇರೆ ಯಾವುದೇ ಆದಾಯ ಅವರಿಗೆ ಇರಲಿಲ್ಲ ಎಂದರೆ ಸರಿ. ಈ ರೀತಿ ಬಂದ ಆದಾಯದಿಂದ ಎರಡು ಎಕರೆ ಭಾಮಿಯನ್ನು ರಾಗಿಬೊಮ್ಮೇನಹಳ್ಳಿಯಲ್ಲಿ ಖರೀದಿಸಿದ್ದರು ಎಂದರೆ ಸರಿ. ಮಲ್ಲೇಗೌಡರು ವಾದಿಗೆ ನಿಮಗೆ ಏನು ಕೊಡಬೇಕು ಕೊಡುತ್ತೇವೆ ಎಂದು ಹೇಳಿ ಅಸಲು ದಾವೆ 656/2012 ವಾಪಸ್ಸು ತೆಗೆಸಿರುತ್ತಾರೆ ಎಂದರೆ ಸರಿ. ನಿಮಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎಂದು ಹೇಳಿದ ಕಾರಣ ಆ ದಾವೆಯನ್ನು ವಾಪಸ್ಸು ತೆಗೆಸಿರುತ್ತಾರೆ ಎಂದರೆ ಸರಿ. ಅಸಲು ದಾವಾ 656/2012 ಅನ್ನು ವಾಪಸ್ಸು ತೆಗೆದು ನಂತರ ಮತ್ತು ಮಲ್ಲೇಗೌಡರ ವಯಸ್ಸನ್ನು ದುರುಪಯೋಗ ಪಡಿಸಿಕೊಂಡು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿಲ್ ಮತ್ತು ದಾನ ಪತ್ರಗಳನ್ನು ಮಲ್ಲೇಗೌಡರಿಂದ ಎರಡನೇ ಪ್ರತಿವಾದಿಯು ತಮ್ಮ ಹೆಂಡತಿ ಮತ್ತು ಮಕ್ಕಳಿಗೆ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎರಡನೇ ಪ್ರತಿವಾದಿಯ ವಿಶ್ವಾಸದಿಂದ ಇರುವ ಕಾರಣದಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ವಿಲ್ ಮತ್ತು ದಾನದ ಬಗ್ಗೆ ಹೇಳಿ ಬರೆಸಿರುವುದಿಲ್ಲ.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದ್ದು ಮುಂದೂಡಲಾಯಿತು**

**ಮರುವಿಚಾರಣೆಃ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ **03.02.2026**